**ಸಾಕ್ಷಿಯನ್ನು ದಿಃ 19.11.2024 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ. ಎಂ ಆರ್ ಎಸ್ ರವರಿಂದಃ**

ಸದರಿ ಪ್ರಕರಣ ದಾಖಲು ಮಾಡುವ ಪೂರ್ವದಲ್ಲಿ ಬೇರೆ ಪ್ರಕರಣಗಳನ್ನು ನಾನು ದಾಖಲು ಮಾಡಿದ್ದೇನೆ ಎಂದರೆಸರಿ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾನು ಯಾವುದೇ ಲೇವಾದೇವಿ ಪರವಾನಿಗೆಯನ್ನು ಹಾಜರುಪಡಿಸಿರುವುದಿಲ್ಲ. ನನ್ನ ಬಳಿ ಈ ಪ್ರಕರಣವನ್ನು ದಾಖಲು ಮಾಡುವ ಮೊದಲು ಯಾವುದೇ ಲೇವಾದೇವಿ ಪರವಾನಿಗೆ ಇರಲಿಲ್ಲ ಎಂದರೆಸರಿ. 2019 ರಲ್ಲಿ ಎಲ್ಲೆಲ್ಲಿ ನನ್ನ ಜಮೀನು ಇತ್ತು ಎಂದರೆ ಸಾಕ್ಷಿ 3 ಕಡೆ ಇತ್ತು ಎಂದು ಉತ್ತರಿಸುತ್ತಾರೆ. ಸರ್ವೆ ನಂ. 12 ಮತ್ತು 17 ದೊಂಬೆ ಗ್ರಾಮದ್ದು . 2019 ರಲ್ಲಿ ಸದರಿ ಜಮೀನುಗಳಲ್ಲಿ ಯಾವುದೇ ಬೆಳೆಗಳನ್ನು ನಾನು ಬೆಳೆದಿರುವುದಿಲ್ಲ ಎಂದರೆ ಸಾಕ್ಷಿ ಅನಾನಸ್ ಅನ್ನು ಬೆಳೆದಿರುತ್ತೇನೆ ಎಂದು ಉತ್ತರಿಸುತ್ತಾರೆ. 2019 -2020 ನೇ ಸದರಿ ಜಮೀನುಗಳ ಆದಾಯ ಮತ್ತು ಖರ್ಚಿನ ಲೆಕ್ಕ ಇದೆಯೇ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ಉತ್ತರಿಸುತ್ತಾರೆ. ಸಾಮಾನ್ಯವಾಗಿ ಕೃಷಿ ಮಾಡುವಾಗ ಖರ್ಚು ವೆಚ್ಚಗಳು ಆಗುತ್ತವೆ ಎಂದರೆಸರಿ. 2019 -2020 ನೇ ಸಾಲಿನಲ್ಲಿ ಕೃಷಿ ಮಾಡುವಾಗ ಖರ್ಚು ವೆಚ್ಚ ಆಗಿತ್ತು ಎಂದರೆ ಸಾಕ್ಷಿ ನನಗೆ ನೆನಪಿಲ್ಲ. ನನ್ನ ಬಳಿ 2019 -2020 ನೇ ಸಾಲಿನ ನನ್ನ ಜಮೀನುಗಳ ಆರ್ ಟಿ ಸಿ ಇದೆ ಎಂದರೆ ಸಾಕ್ಷಿ ಇದೆ ಎಂದು ಉತ್ತರಿಸುತ್ತಾರೆ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ಸದರಿ ಆರ್ ಟಿ ಸಿ ಅನಾನಸ್ ನಮೂದು ಇರುವುದಿಲ್ಲ ಎಂದರೆ ಸಾಕ್ಷಿ ನಾನು ನೋಡಿ ಹೇಳಬೇಕಾಗುತ್ತದೆ ಎಂದು ಉತ್ತರಿಸುತ್ತಾರೆ.

ಎಲ್.ಐ.ಸಿ ಅಲ್ಲಿ ವಿಮೆಯನ್ನು ಮಾಡಿಸಿದ್ದಲ್ಲಿ ಕಮೀಷನ್ ಕೊಡುತ್ತಾರೆ ಎಂದರೆಸರಿ. 2019-2020 ರಲ್ಲಿ ಎಲ್.ಐ.ಸಿ ಯಿಂದ ಎಷ್ಟು ಕಮೀಷನ್ ಬಂದಿದೆ ಎಂದು ದಾಖಲಾತಿ ಇದೆ ಎಂದರೆಸರಿ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ಎಲ್.ಐ.ಸಿ ಯಿಂದ ನನ್ನ ಬ್ಯಾಂಕ್ ಖಾತೆಗೆ ಕಮೀಷನ್ ಬರುತ್ತದೆ. 2019-2020 ರಲ್ಲಿ ನನ್ನ ಯೂನಿಯನ್ ಬ್ಯಾಂಕ್ ಖಾತಾ ಪುಸ್ತಕದಲ್ಲಿ ಕಮೀಷ ನ್ ಬಗ್ಗೆ ನಮೂದು ಇದೆ ಎಂದರೆಸರಿ. ಅದನ್ನು ನ್ಯಾಯಾಲಯಕ್ಕೆ ನೀಡಲು ನನಗೆ ತೊಂದರೆ ಇರುವುದಿಲ್ಲ. 2019-2020 ರಲ್ಲಿ ನನಗೆ ಅಷ್ಟು ಅದಾಯ ಇರಲಿಲ್ಲ ಎಂದರೆಸರಿಯಲ್ಲ.

2019-2020 ರಲ್ಲಿ ನನ್ನ ಬ್ಯಾಂಕ್ ಖಾತೆಯಲ್ಲಿ ಹಣಹಾಕುವುದು , ತೆಗೆಯುವುದು ಮಾಡಿರುತ್ತೇನ. ಅಕ್ಟೋಬರ್ 2019 ರಲ್ಲಿ ನಾನು ಹಣವನ್ನು ತೆಗೆದಿರುವುದು ಹಾಗೂ ಹಾಕಿರುವ ಲೆಕ್ಕ ಸಿಗ್ತುತ್ತದೆ ಎಂದರೆಸರಿ. ಅಕ್ಟೋಬರ್ 2019 ರಲ್ಲಿ ನಾನು ಲೆಕ್ಕ ಪತ್ರ ಗಳನ್ನು ನಾನು ಆಡಿಟ್ ಗೆ ನೀಡಿದ್ದೇನೆ ಎಂದರೆ ಸಾಕ್ಷಿ ನೋಡಿ ಹೇಳಬೇಕು ಎಂದು ಉತ್ತರಿಸುತ್ತಾರೆ. 2019 -20, 2020-21 ರ ಆಡಿಟ್ ವರದಿ ಹಾಗೂ ಆದಾಯ ತೆರಿಗೆ ರಿರ್ಟನ್ಸ ನ ದಾಖಲಾತಿಗಳು ನನ್ನ ಬಳಿ ಇದೆ. 2019-20 ರ ಎಲ್ಲಾ ವ್ಯವಹಾರಗಳನ್ನು ನಾನು ಸೇರಿಸಿಯೇ ಅಡಿಟ್ ವರದಿ ನೀಡಿರುತ್ತೇನೆ ಯಾವುದೇ ವ್ಯವಹಾರಗಳನ್ನು ಬಿಟ್ಟಿರುವುದಿಲ್ಲ. ಆರೋಪಿ ಸಾಲ ಕೊಟ್ಟ ವಿಚಾರವನ್ನು ಆಡಿಟ್ ವರದಿಯಲ್ಲಿ ನಮೂದು ಮಾಡಿದ್ದೇನೋ ಇಲ್ಲವೊ ಎಂದು ನಾನು ದಾಖಲಾತಿ ನೋಡಿ ಹೇಳಬೇಕು .

ಆರೋಪಿಗೆ ಸಾಲವನ್ನು ನೀಡುವಾಗ ಬೇರೆ ಯಾರು ಇದ್ದರು ಎಂದರೆ ಸಾಕ್ಷಿ ಯಾರು ಇರಲಿಲ್ಲ ಎಂದು ಉತ್ತರಿಸುತ್ತಾರೆ. ಆರೋಪಿಗೆ ಸಾಲವನ್ನು ನೀಡುವಾಗ ಮನೆಯಲ್ಲಿ ನಾನು ಒಬ್ಬನೇ ಇದ್ದೆ. ಅರೋಪಿಯ ಅಡಚಣೆಯ ಬಗ್ಗೆ ದಾಖಲಾತಿಯನ್ನು ನಾನು ಅರೂಪಿಗೆ ಹಣ ಕೊಡುವ ಮೊದಲು ಪಡೆದುಕೊಂಡಿರುವುದಿಲ್ಲ ಅದರೆ ಆತ ಟ್ರ್ಯಾಕ್ಟರ್ ಲೋನ್ ಗೆ ಬೇಕು ಎಂದು ಹೇಳಿ ತೆಗೆದುಕೊಂಡಿರುತ್ತಾನೆ. ಟ್ರ್ಯಾಕ್ಟರ್ ಆರೋಪಿಯ ಬಳಿ ಇತ್ತು ಎಂದು ನನಗೆ ಗೊತ್ತಿತ್ತು ಟ್ರ್ಯಾಕ್ಟರ್ ಗೆ ಸಂಬಂಧಪಟ್ಟ ದಾಖಲಾತಿಗಳನ್ನು ನಾನು ಪಡೆದುಕೊಂಡಿರುವುದಿಲ್ಲ. 2019-2020 ರಲ್ಲಿ ಹಾಗೂ ಅದರ ಪೂರ್ವದಲ್ಲಿ ಆಗಲಿ ಆರೋಪಿಗೆ ಯಾವುದೇ ಟ್ರ್ಯಾಕ್ಟರ್ ಇರಲಿಲ್ಲ ಎಂದರೆಸರಿಯಲ್ಲ. 2019-2020 ರಲ್ಲಿ ಆರೋಪಿ ಯಾವುದೇ ಟ್ರ್ಯಾಕ್ಟರ್ ಗಾಗಿ ಲೋನ್ ನ್ನು ಸಹ ಪಡೆದಿರುವುದಿಲ್ಲ ಎಂದರೆಸರಿಯಲ್ಲ. ಟ್ರ್ಯಾಕ್ಟರ್ ಲೋನ್ ಗಾಗಿ ಆರೋಪಿ ನನ್ನಿಂದ ಹಣವನ್ನುಪಡೆದುಕೊಂಡಿದ್ದಾರೆ ಎಂದು ಇದೆ ಮೊದಲ ಬಾರಿಗೆ ಹೇಳುತ್ತಿದ್ದೇನೆಯೇ ಹೊರತು ಪಿರ್ಯಾದುವಿನಲ್ಲಾಗಲೀ ನೋಟಿಸನಲ್ಲಾಗಲಿ ಹೇಳಿರುವುದಿಲ್ಲ ಎಂದರೆಸರಿಯಲ್ಲ.

ಆರೋಪಿಗೆ ನಾನು ಸಾಲವನ್ನು ನೀಡಿದ ಬಾಬ್ತು ಯಾವುದೇ ಹಣ ಸಂದಾಯ ರಶೀದಿಯನ್ನು ಪಡೆದುಕೊಂಡಿರುವುದಿಲ್ಲ ಸಾಕ್ಷಿ ಮುಂದುವರೆದು ವಿಶ್ವಾಸದಿಂದ ಕೊಟಿಟರುತ್ತೇನೆ ಎಂದು ಉತ್ತರಿಸುತ್ತಾರೆ. ನಾನು ಅನೇಕ ಸಿವಿಲ್ ಹಾಗೂ ಕ್ರಿಮಿನಲ್ ಪ್ರಕರಣವನ್ನು ದಾಖಲು ಮಾಡಿರುವುದರಿಂದ ಯಾವ ರೀತಿಯ ದಾಖಲಾತಿಗಳನ್ನು ಹಣ

ನೀಡಿದಾಗ ತೆಗೆದುಕೊಳ್ಳ ಬೇಕು ಎಂದು ನನಗೆ ಮಾಹಿತಿ ಇದೆ ಎಂದರೆ ಸಾಕ್ಷಿ ನಾನು ಕ್ರಿಮಿನಲ್ ಪ್ರಕರಣಗಳನ್ನು ನಾನು ಮಾಡಿರುವುದಿಲ್ಲ ಕೇವಲ ಸಿವಿಲ್ ಪ್ರಕರಣಗಳನ್ನು ದಾಖಲು ಮಾಡಿದ್ದೆ ಎಂದು ಉತ್ತರಿಸುತ್ತಾರೆ. ಸಿವಿಲ್ ಪ್ರಕರಣದಲ್ಲಿ ಅಗ್ರಿಮೆಂಟ್ ಮೇಲೆ ಕೇಸ್ ಅನ್ನು ಹಾಕಿದ್ದೇನೆ ಎಂದರೆಸರಿ. ಸದರಿ ಸಿವಿಲ್ ಪ್ರಕರಣ ಆದ ನಂತರ ಆರೋಪಿಯ ಮೇಲೆ ಈ ಪ್ರಕರಣವನ್ನು ದಾಖಲು ಮಾಡಿದ್ದೇನೆ ಎಂದರೆ ಸಾಕ್ಷಿ ನನಗೆ ನೆನಪಿಲ್ಲ. ಆರೋಪಿಗೆ ಸಾಲವನ್ನು ನೀಡಿದಾಗ ಏನಾದರೂ ದಾಖಲಾತಿಗಳನ್ನು ಬರೆಸಿಕೊಂಡಿದ್ದೀರಾ ಎಂದರೆ ಸಾಕ್ಷಿ ವಿಶ್ವಾಸದ ಮೇಲೆ ನಾನು ಕೊಟ್ಟಿದ್ದೆ ಎಂದು ಉತ್ತರಿಸುತ್ತಾರೆ.

ನಾನು ಆರೋಪಿಗೆ ಯಾವುದೇ ಸಾಲವನ್ನು ಕೊಡದೇ ಇದ್ದುದ್ದರಿಂದ ಆರೋಪಿಗೆ ಯಾವ ದಿನದಂದು ಸಾಲವನ್ನು ಕೊಟ್ಟಿದ್ದೇನೆ ಎಂದು ನನ್ನ ಪಿರ್ಯಾದುವಿನಲ್ಲಿ ನಮೂದು ಮಾಡಿರುವುದಿಲ್ಲ ಎಂದರೆಸರಿಯಲ್ಲ. ನಾನು ಆರೋಪಿಗೆ ಸಾಲವನ್ನು ನೀಡದೆ ಇದ್ದುದರಿಂದ ನಾನು ಪಿರ್ಯಾದು, ನೋಟಿಸ್ ಹಾಗೂ ಮುಖ್ಯ ವಿಚಾರಣೆಯಲ್ಲಿ ಆರೋಪಿ ವಿರುದ್ಧ ಸುಳ್ಳು ಹೇಳುತ್ತಿದ್ದೇನೆ ಎಂದರೆಸರಿಯಲ್ಲ. ಆರೋಪಿಗೆ ಸಾಲವನ್ನು ಕೊಟ್ಟ ದಿನಾಂಕದ ಬಗ್ಗೆ ಏನಾದರೂ ನಮೂದು ಅಥವಾ ದಾಖಲೆ ಇದೆಯೇ ಎಂದರೆ ಸಾಕ್ಷಿ ನಾನು ನೋಡಿ ಹೇಳಬೇಕು ಎಂದು ಉತ್ತರಿಸುತ್ತಾರೆ. ಆರೋಪಿಗೆ ಸಾಲವನ್ನು ಕೊಟ್ಟ ಬಗ್ಗೆ ನಿಪಿ 1 ರಿಂದ 5 ಅನ್ನು ಹೊರತುಪಡಿಸಿ ಬೇರೆ ದಾಖಲಾತಿಗಳು ಇವೆಯೇ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಸಾಕ್ಷಿ ಮುಂದುವರೆದು ವಿಶ್ವಾಸದ ಮೇಲೆ ಕೊಟ್ಟಿರುತ್ತೇನೆ ಎಂದು ಉತ್ತರಿಸುತ್ತಾರೆ. ವಿಶ್ವಾಸದ ಮೇಲೆ ಕೊಟ್ಟಿರುತ್ತೇನೆ ಎಂದು ನನ್ನ ಪಿರ್ಯಾದು, ನೋಟಿಸ್ ಹಾಗೂ ಮುಖ್ಯ ವಿಚಾರಣೆಯಲ್ಲಿ ನಮೂದು ಇಲ್ಲ ಎಂದರೆಸರಿಯಲ್ಲ.

2019 ರಲ್ಲಿ ನಾನು ಮನೆ ಕಟ್ಟಿಸುವಾಗ ಸಾಲವನ್ನು ಮಾಡಿರುತ್ತೇನೆ. 2019 ರಲ್ಲಿ ನಾನು ಎಷ್ಟು ಸಾಲ ಮಾಡಿದ್ದೇನೆ ಎಂದು ನನ್ನ ಬಳಿ ದಾಖಲಾತಿಗಳು ಇವೆ. ಸದರಿ ದಾಖಲಾತಿಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ . ನಿಪಿ 1, 2006 ಕ್ಕೆ ಸಂಬಂಧಪಟ್ಟ ಚೆಕ್ ಲೀಫ್ ಎಂದರೆಸರಿಯಲ್ಲ. ನಿಪಿ 1(ಎ) ಅನ್ನು ಹೊರತುಪಡಿಸಿ ಉಳಿದ ಬರವಣಿಗೆಗಳು ಆರೋಪಿಯದ್ದು ಅಲ್ಲ ಎಂದರೆಸರಿಯಲ್ಲ. ನಿಪಿ 1(ಎ) ಹಾಗೂ ಉಳಿದ ಬರವಣಿಗೆಗಳಲ್ಲಿ ವ್ಯತ್ಯಾಸ ಇದೆ ಎಂದರೆಸರಿಯಲ್ಲ. ಅರೋಪಿ 2006 ರಲ್ಲಿ ತನ್ನ ಖಾತೆಯನ್ನು ಹೊಂದಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. 2017 ರಲ್ಲಿ ಅವರ ಖಾತೆಯಲ್ಲಿ

ಸಾಕಷ್ಟು ಹಣ ಇಲ್ಲ ಎಂದು ಖಾತೆಯನ್ನು ಮುಕ್ತಾಯ ಗೊಳಿಸಿದ್ದರು ಎಂದರೆ ಸಾಕ್ಷಿ ನನಗೆ ಆ ವಿಚಾರ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ.

2019 ರಲ್ಲಿ ಮನೆ ಹಾಗೂ ಕೃಷಿಗೆ ಎಷ್ಟು ಖರ್ಚು ಬರುತ್ತಿತ್ತು ಎಂದರೆ ಸಾಕ್ಷಿ ನೋಡಿ ಹೇಳಬೇಕು. ಅಂದಾಜು ಲೆಕ್ಕವನ್ನು ಈಗ ಹೇಳಲು ಸಾಧ್ಯವಿಲ್ಲ. 2019-2020 ನಾನು ಎಷ್ಟು ಅದಾಯ ಹಾಗೂ ಖರ್ಚು ಇತ್ತು ಎಂದು ಗೊತ್ತಿದ್ದರು ಗೊತ್ತಿಲ್ಲ , ದಾಖಲೆ ನೊಡೀ ಹೇಳಬೆಕು ಎಂದು ಸುಳ್ಳು ಹೇಳುತ್ತಿದೇನೆ ಎಂದರೆಸರಿಯಲ್ಲ. ಆರೋಪಿಗೆ ಸಾಲವನ್ನು ಕೊಟ್ಟ ದಿನಾಂಕದಂದು ನನ್ನ ಬಳಿ ಚೆಕಿನ ಮೊತ್ತ ಇತ್ತು ಎಂದು ತೋರಿಸಲು ಯಾವುದೇ ದಾಖಲಾತಿ ಇರುವುದಿಲ್ಲ ಎಂದರೆಸರಿಯಲ್ಲ.

ಮಹಾಬಲೇಶ್ವರ ಮತ್ತು ಸುಧಾಕರ್ ಸ್ನೇಹಿತರು ಎಂದರೆ ಗೊತ್ತಿಲ್ಲ. ಮಹಾಬಲೇಶ್ವರರ ಜಮೀನಿನ ವ್ಯವಹಾರಕ್ಕೆ ಆರೋಪಿ ಮಧ್ಯವರ್ತಿ ಆಗಿದ್ದರು ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಕಮೀಷನ್ ನ ಭದ್ರತೆಗಾಗಿ ಆರೋಪಿಯಿಂದ ನಾನು ಒಂದು ಸಹಿ ಮಾಡಿದ ಖಾಲಿ ಚೆಕ್ ಅನ್ನು ಪಡೆದುಕೊಂಡಿರುತ್ತೇನೆ ಎಂದರೆಸರಿಯಲ್ಲ. ಮಹಾಬಲೇಶ್ವರೊಂದಿಗೆ ಜಮೀನಿನ ಖರೀದಿ ವ್ಯವಹಾರ ಮುರಿದು ಬಿದ್ದುದರಿಂದ ಅವರ ಮೇಲೆ ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸಾಕ್ಷಿ ಅದಕ್ಕೂ ಈ ಪ್ರಕರಣಕ್ಕೂ ಸಂಬಂಧ ಇಲ್ಲ ಎಂದು ಉತ್ತರಿಸುತ್ತಾರೆ. ನಂತರದಲ್ಲಿ ಈಗ ಆರೋಪಿಯ ಮೇಲೆ ಸದರಿ ಪ್ರಕರಣಕ್ಕೆ ಸಂಬಂಧಪಟ್ಟಂತೆಯೇ ಈ ಪ್ರಕರಣವನ್ನು ದಾಖಲು ಮಾಡಿದ್ದೇನೆ ಎಂದರೆಸರಿಯಲ್ಲ. ನನ್ನಿಂದ ಆರೋಪಿ ಯಾವುದೇ ಸಾಲವನ್ನು ಪಡೆದುಕೊಳ್ಳುವ ಅವಶ್ಯಕತೆ ಇರಲಿಲ್ಲ ಎಂದರೆಸರಿಯಲ್ಲ. ಮಹಾಬಲೇಶ್ವರವರ ಪ್ರಕರಣ ವಜಾ ಆಗಿದೆ ಎಂದರೆಸರಿ.

ಆರೋಪಿ ನನ್ನ ಬಳಿ ಅಕ್ಟೋಬರ್ 2019 ರಂದು ಸಾಲವನ್ನು ಕೇಳಿದ್ದಾಗಲೀ, ನಾನು ಆತನಿಗೆ ಕೊಟ್ಟಿದಾಗಲೀ, ಆ ಬಾಬ್ತು ನಿಪಿ 1 ಅನ್ನು ನೀಡಿದ್ದಾಗಲೀ ಸುಳ್ಳು ಎಂದರೆಸರಿಯಲ್ಲ. ಆರೋಪಿ ಯಾವುದೇ ಹಣ ನೀಡಲು ಬಾಕಿ ಇಲ್ಲದೇ ಇದ್ದರೂ ಆತನ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆಸರಿಯಲ್ಲ. ನಿಪಿ1 ರಿಂದ 5 ಕ್ಕೂ ಹಾಗೂ ನಿಪಿ 1 ರ ಮೊತ್ತಕ್ಕೂ ಸಂಬಂಧ ಇಲ್ಲ ಎಂದರೆಸರಿಯಲ್ಲ.

**<u>ಮರುವಿಚಾರಣೆ ಇಲ್ಲ .</u>**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

**ಓದಿ ಹೇಳಿ ಕೇಳಿ ಸರಿ ಇದೆ**

ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.